ವಿಷಯ: ದ. ಕನ್ನಡ ಜಿಲ್ಲೆಯಲ್ಲಿ ಸ್ವಯಂ ಉದ್ಯೋಗ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1339 (2043)

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ) ಮಾನ್ಯ ಸಣ್ಣ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1989-90, 1990-91,ನೇ ಡಿಸೆಂಬರ್ ಅಖ್ಯೆರುವರೆಗೆ ಸ್ವಯಂ ಉದ್ಯೋಗ ಯೋಜನೆಯಲ್ಲಿ ಎಷ್ಟು ಜನರಿಗೆ ಉದ್ಯೋಗ ಒದಗಿಸಿಕೊಡಲಾಗಿದೆ ?

ಆ) ಈ ಯೋಜನೆಗೆ ಮೇಲ್ಕಂಡ ಸಾಲಿನಲ್ಲಿ ಬಿಡುಗಡೆಯಾದ ಹಣವೆಷ್ಟು ?

ಇ) ಸ್ವಯಂ ಉದ್ಯೋಗ ಅಭ್ಯರ್ಥಿಗಳಿಗೆ ಆಯ್ಕೆಯಲ್ಲಿ ಅನ್ಯಾಯವಾಗುತ್ತಿದೆ ಎಂಬ ದೂರುಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಸ್ವಯಂ ಉದ್ಯೋಗ ಅಭ್ಯರ್ಥಿಗಳಿಗೆ ಈ ಓಜನೆಯ ಫಲ ಸರಿಯಾಗಿ ದೊರಕಲು ಆಯ್ಕೆ ಸಮಿತಿಯಲ್ಲಿ ಅಧಿಕಾರೇತರರಿಗೆ ಅವಕಾಶ ಕಲ್ಪಿಸಿ ಕೊಡಲಾದುವುವೇ ?

ಶ್ರೀ ನಸೀರ್ ಅಹಮದ್ (ಸಣ್ಣ ಕೈಗಾರಿಕಾ ರಾಜ್ಯ ಸಚಿವರು)

ಅ)

ವರ್ಷ	ಫಲಾನುಭವಿಗಳ ಸಂಖ್ಯೆ
1989-90	400
1990-91	223
ಒಟ್ಟು	623

ಆ) ಈ ಯೋಜನೆಗೆ ಸರ್ಕಾರ ಹಣ ಬಿಡುಗಡೆ ಮಾಡುತ್ತಿಲ್ಲ. ಆದರೆ ವಾಣಿಜ್ಯ ಬ್ಯಾಂಕ್‌ಗಳು ಈ ಅಭ್ಯರ್ಥಿಗಳಿಗೆ ಸಾಲಗಳನ್ನು ಮಂಜೂರು ಮಾಡುತ್ತಿವೆ.

ಇ) ಬಂದಿದೆ.

ಈ) ಈ ಯೋಜನೆಯಡಿಯಲ್ಲಿ ಭಾರತ ಸರ್ಕಾರದ ಕಾರ್ಯ ಸೂಚಿಯಂತೆ ಅಧಿಕಾರೇತರರಿಗೆ ಆಯ್ಕೆ ಸಮಿತಿಯಲ್ಲಿ ಅವಕಾಶ ಇರುವುದಿಲ್ಲ.

ವಿಷಯ:ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೇರ್ಪಡೆಯಾದವರ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1351 (1862)

ಶ್ರೀ ಎನ್. ಚಿನಾಯ್ಕ (ಮೊಳಕಾಲ್ಮೂರು) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಈವರೆಗೆ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರು ನೋಂದಾಯಿಸಲ್ಪಟ್ಟಿರುವವರ ಸಂಖ್ಯೆ ಎಷ್ಟು ?

ಆ) 1989-90, 1990-91ನೇ ಸಾಲಿನಲ್ಲಿ 3ನೇ ಮತ್ತು 4ನೇ ದರ್ಜೆಯ ಹುದ್ದೆಗಳು ಎಷ್ಟು ಜನಕ್ಕೆ ಉದ್ಯೋಗ ವಿನಿಮಯದಿಂದ ದೊರಕಿವೆ ?

ಇ) 1989-90, 1990-91ನೇ ವರ್ಷದಲ್ಲಿ 3ನೇ ಮತ್ತು 4ನೇ ದರ್ಜೆಯ ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು ?

ಈ) ಈ ಪೈಕಿ ಹಿಂದುಳಿದ ಹಾಗೂ ಪರಿಶಿಷ್ಟ ಜಾತಿ ಮತ್ತು ಪ್ರವರ್ಗದವರಿಗೆ ಎಷ್ಟು ಹುದ್ದೆಗಳು ದೊರಕಿವೆ?

ಶ್ರೀ ಎ. ಎಸ್. ನಾಡಗೌಡ (ಕಾರ್ಮಿಕ ಸಚಿವರು)